# ಮುಟ್ಟೆಂಬ ಸೃಷ್ಟಿ ಪುರಾಣದೊಳಗೆ

ಭೂದೇವಿ, ಭೂತಾಯಿ, ಭೂಮಿ ತೂಕದ ಹೆಣ್ಣು– ಇವು ಹೆಣ್ಣು ಮತ್ತು ಭೂಮಿಯನ್ನು ಕುರಿತಾದ ಮತ್ತೆ ಮತ್ತೆ ಬಳಕೆಯಾಗುವ ಪದಗಳು. ಎಲ್ಲವನ್ನು ಹೊರಬಲ್ಲ, ಹೆರಬಲ್ಲ, ಪೊರೆಯಬಲ್ಲ ತಾಳ್ಮೆಯ ಸಂಕೇತ ಭೂಮಿ. ಮತ್ತೆ ಮತ್ತೆ ಮಾನವನ ಸ್ವಾರ್ಥದಲ್ಲಿ ನೊಂದರೂ, ನರಳಿದರೂ ಅವನನ್ನು ನಿರಂತರ ಪೊರೆಯುವ ಜೀವ ಪರ ಶಕ್ತಿವುಳ್ಳವಳು. ಮತ್ತೆ ಮತ್ತೆ ಮಾನವನ ದುರಾಸೆಗೆ, ಧ್ವಂಸಕ್ಕೆ ಈಡಾಗಿ ಛಿದ್ರವಾದರೂ ನಾಳೆಯ ಬೀಜಗಳನ್ನು ಒಡಲಲ್ಲಿ ಹಿಡಿದಿಟ್ಟು ಅಕ್ಷಯವಾಗಿಸುವ ಜೀವ ಪ್ರೀತಿಯುಳ್ಳವಳು. ಹೀಗಾಗಿಯೇ ಜನಪದರು ಅವಳನ್ನು ಭೂಮಿ ತಾಯಿ ಎಂದೇ ಕರೆದರು. ಏಳುವಾಗಲೇ ಅವರು ನೆನೆಯ ಹೊರಟಿರುವುದು ಹಾರ, ಕಿರೀಟ, ಪೀತಾಂಬರಧಾರಿಗಳಾದ ಜಗಜಗಿಸುವ ದೈವಗಳನ್ನಲ್ಲ– ಅವರು ನೆನೆಯುವುದು ಅನ್ನ, ನೀರು, ನೆಲೆ ಕೊಟ್ಟ ಭೂಮಿಯನ್ನು. ಅವಳು ಮುನಿದರೆ ಭೂಕಂಪವಾಗಿ ಕಟ್ಟಿಕೊಂಡ ಕಟ್ಟಡ, ವ್ಯವಹಾರ, ವ್ಯವಸಾಯ, ಬದುಕು ಎಲ್ಲವೂ ಛಿದ್ರ ಛಿದ್ರಗೊಳ್ಳುತ್ತದೆ. ಅವರು ನೆನೆಯುವುದು ಎಳ್ಳು ಜೀರಿಗೆ ಬೆಳೆಯೋ, ಭೂಮಿತಾಯಿಯನ್ನು.

ಹೆಣ್ಣೊಡಲಿನ ಒಳಗೆ ಅಡಗಿರುವ ಸೃಷ್ಟಿಕ್ರಿಯೆ, ಆಕೆಯ ಮೊಲೆ, ಮುಡಿ, ಗರ್ಭ, ಮುಟ್ಟು ಇತ್ತೀಚೆಗೆ ಚರ್ಚೆಯಾಗುತ್ತಿರುವ ವಿಷಯಗಳು. ಪೂರ್ವದ ಹಳೆಗನ್ನಡದ ಕವಿಗಳು ಅವಕಾಶ ಸಿಕ್ಕ ಕಡೆಯಲ್ಲೆಲ್ಲ ಅವಳನ್ನು, ಅವಳ ದೇಹದ ಲಾಲಿತ್ಯವನ್ನು ಬಿಡದೇ ವರ್ಣಿಸಿದ್ದಾರೆ. ಭಾರತದ ಯಾವುದೇ ದೇಗುಲಗಳನ್ನು ನೋಡಿದರೂ ಆಕೆಯ ನಗ್ನತೆಯ ಕೆತ್ತನೆ ಇದ್ದೇ ಇರುತ್ತದೆ. ಗರ್ಭಗುಡಿಯೊಳಗೆ ದೇವನಿದ್ದರೆ ದೇವಾಲಯದ ಗೋಡೆಗಳ ಮೇಲೆ ಮೈಥುನದ ಕೆತ್ತನೆಗಳಿರುತ್ತವೆ. ತ್ಯಾಗ, ಭೋಗ, ಕಾಮುಗಳನ್ನು ಒಂದರ ಮೂಲಕ ಇನ್ನೊಂದರ ಪ್ರವೇಶವೆನ್ನುವಂತೆ ನಮ್ಮ ಪರಂಪರೆ ಚಿಂತಿಸಿದೆ. ಆದಿಕವಿ ಪಂಪ ಮೋಕ್ಷದ ಕಡೆಗೆ ಚಲಿಸಲಿರುವ ಆದಿದೇವನನ್ನು ಭೋಗದ ಮೂಲಕ ಹಾದು ಬರುವಂತೆ ಮಾಡುತ್ತಾನೆ. ಎಲ್ಲಾ ಭೋಗ, ಭಾಗ್ಯಗಳನ್ನು ಅನುಭವಿಸಿ ಅವು ಅನಿತ್ಯವೆಂದು ಅರಿತಾದ ನಂತರವೇ ಯೋಗ ಭೂಮಿಕೆಯೊಂದು ಸಿದ್ಧವಾಗುತ್ತದೆ. ಹೀಗೆ ನಮ್ಮ ಸಂಸ್ಕೃತಿಯ ಚಿಂತನೆಯಲ್ಲಿ ಪ್ರೇಮ ಸಾಧಕರ ಜೀವನವನ್ನು ಬಿಸಿಲು ನೆರಳಿನಾಟದಂತೆಯೇ ನೋಡಲಾಗಿದೆ.

ಹೆಣ್ಣಿಗೆ ಮುಟ್ಟು ಸೂತಕಗಳಿದ್ದಂತೆಯೇ ಜನನವೆಂಬ ಸಂಭ್ರಮದ ಮೆಟ್ಟಿಲೂ ಇದೆ. ಆಕೆ ಋತುಮತಿಯಾದಳು ಎಂದರೆ ಸಂತಾನಕ್ಕೆ ಸಿದ್ಧಳಾದಂತೆ. ಬುಡಕಟ್ಟು ಜನಾಂಗಗಳಲ್ಲಿ ಅವಳ ಗರ್ಭಧಾರಣೆಯ ಶಕ್ತಿಯನ್ನು ಆಧರಿಸಿಯೇ ವಿವಾಹ ನಿಶ್ಚಯವಾಗುತ್ತಿತ್ತು. ಮುಟ್ಟೆಂಬುದು ಹೊಲೆಯಲ್ಲ, ಅದು ಸೃಷ್ಟಿಕ್ರಿಯೆಯ ಭಾಗ್ಯವೆಂದೇ ಪರಿಗಣಿಸಲಾಗಿತ್ತು. ಮುಟ್ಟು ಎನ್ನುವುದು ಒಂದು ನೈಸರ್ಗಿಕ ಕ್ರಿಯೆ. ಶಾಸ್ತ್ರಗಳು ಈ ನೈಸರ್ಗಿಕ ಕ್ರಿಯೆಯನ್ನು 'ಹೊಲೆ'ಯೆಂದು ಕರೆದು ಅವಳನ್ನು ಪ್ರತ್ಯೇಕಿಸುವ ಕೆಲಸ ಮಾಡಿದವು. ಈ ಅವಧಿಯಲ್ಲಿ ಕಾಡುವ ಹಲವು ದೈಹಿಕ ವೈಪರೀತ್ಯಗಳನ್ನು ಅನುಭವಿಸುವುದರ ಜೊತೆಗೆ ಪ್ರತ್ಯೇಕಿಸಿ ಇಡುವ ವ್ಯವಸ್ಥೆ ಅವಳನ್ನು ಇನ್ನಷ್ಟು ನೋಯುವಂತೆ ಮಾಡಿತು. ಈ ಅಸಮಾನತೆಯ ಚಿಂತನೆಗಳು ಚಾಲ್ತಿಯಲ್ಲಿದ್ದಾಗಲೇ ವಚನಕಾರರು ಅವಳ ದೈಹಿಕ ವೈಪರೀತ್ಯಗಳನ್ನು ಒಪ್ಪಿಕೊಂಡು ಅವಳನ್ನು ಒಬ್ಬ ಸಹಜೀವಿಯನ್ನಾಗಿ ಕಂಡರು. ಧೈರ್ಯ ತುಂಬುವ ಕೆಲಸ ಮಾಡಿದರು. ನಿಸರ್ಗ ಸಹಜವಾದ 'ಮುಟ್ಟಿನ' ಕಾರಣದಿಂದಾಗಿ ಶೂದ್ರಳನ್ನಾಗಿ ನೋಡದೆ 'ಹೊಲೆಯುಂಟೆ ಲಿಂಗವಿದ್ದೆದೆಯಲ್ಲಿ' ಎಂದರು. 'ಮನದ ಸೂತಕ ಇಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ' ಎಂದು ಸಂತೈಸಿದರು. ಕೊನೆಗೆ 'ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ' ಎಂದು ಒಪ್ಪಿಕೊಂಡರು.

ಮುಟ್ಟೆಂಬ ಸೂತಕವೇ ಕಾರಣವಾಗಿ ಇಂದು ನಡೆಯುತ್ತಿರುವ ಚರ್ಚೆಯನ್ನು ನೋಡಿದರೆ ನಾವು ವೇದ, ಪುರಾಣಗಳು ಹೇಳಿದ 'ಹೆಣ್ಣು ಶೂದ್ರಳೆಂಬ' ಪ್ರತ್ಯೇಕತೆಯ ಕಡೆಗೆ ಹಿಮ್ಮುಖವಾಗಿ ಚಲಿಸುತ್ತಿದ್ದೇವೆ ಎನಿಸುತ್ತದೆ. 'ಹದಿಬದಿಯ ಧರ್ಮ' ಬರೆದ ಸಂಚಿ ಹೊನ್ನಮ್ಮ ಮನುಸ್ಮೃತಿಯ ಆವರಣದಲ್ಲಿಯೇ ಅಲ್ಲಲ್ಲಿ ಕೆಲವು ಪ್ರಶ್ನೆಗಳನ್ನು ಎತ್ತುತ್ತಾಳೆ. 'ಪೆಣ್ಣು ಪೆಣ್ಣೆಂದು ಹೀಗಳೆವ ಕಣ್ಣು ಕಾಣದ ಗಾವಿಲರು' ಎಂದು ಖಂಡಿಸುತ್ತಾಳೆ.

ಭೂಮಿ ಹೆಣ್ಣಾಗಿರುವುದರಿಂದ ವರ್ಷಕ್ಕೊಮ್ಮೆ ಮುಟ್ಟಾಗುತ್ತಾಳೆ ಎಂಬ ನಂಬಿಕೆ ತುಳುನಾಡಿನ ರೈತ ಕುಟುಂಬಗಳಲ್ಲಿದೆ. ವಿಶೇಷವಾಗಿ ಈ ದಿನವನ್ನು ಕೆಡ್ಡಸ ಎಂದು ಕರೆಯಲಾಗುತ್ತದೆ. ತುಳು ಮಾಸಗಳಲ್ಲಿ ಮಕರ ಮಾಸದ 27ನೆಯ ದಿನ ಭೂಮಿ ತಾಯಿಗೆ ಋತು ಸ್ರಾವವಾಗುತ್ತದೆ ಎಂಬ ನಂಬಿಕೆಯಿದೆ. ಆಗ ಉಳುಮೆ ಮಾಡುವುದಿಲ್ಲ. ಭೂಮಿ ರಜಸ್ವಾಲೆಯಾದಾಗ ಈ ಚಟುವಟಿಕೆಗಳು ಅವಳಿಗೆ ನೋವನ್ನು ಉಂಟು ಮಾಡುವುದಲ್ಲದೆ ಆಕೆ ಬಂಜೆಯಾಗುತ್ತಾಳೆ ಎಂಬ ನಂಬಿಕೆಯೂ ಅವರಲ್ಲಿದೆ. ಮೂರನೆಯ ದಿನ ಭೂಮಿಯ ಮುಟ್ಟು ಕಳೆಯುವ ದಿನವಾಗಿದ್ದು ಹೆಣ್ಣುಮಕ್ಕಳು ತಾವು ಸ್ನಾನ ಮಾಡಿ ತುಳಸಿ ಕಟ್ಟೆಯ ಎದುರು ಸಾರಿಸಿ ಭೂಮಿಯ ಮೈಲಿಗೆ ಸ್ನಾನಕ್ಕೆ ಅಗತ್ಯವಾದ ಎಣ್ಣೆಯನ್ನು ಸುರಿದು ಸೀಗೆಕಾಯಿ ಇಡುತ್ತಾರೆ. ಸ್ನಾನದ ನಂತರ ಬಳಸುವ ಕನ್ನಡಿ, ಕುಂಕುಮ, ಬಾಚಣಿಕೆ ಮತ್ತಿತರ ಸಾಮಗ್ರಿಗಳನ್ನು ಸಹ ಇಡುತ್ತಾರೆ. ಪ್ರಸಾದಕ್ಕಾಗಿ 'ನನ್ಯರಿ' ಎಂಬ ವಿಶೇಷ ಪದಾರ್ಥ ಮಾಡಲಾಗುತ್ತದೆ. ಎಲ್ಲಾ ರೀತಿಯ ನವಧಾನ್ಯಗಳನ್ನು ಹುರಿದು ಪುಡಿ ಮಾಡಿ ಅದಕ್ಕೆ ಬೆಲ್ಲ, ತೆಂಗಿನಕಾಯಿ, ತುಪ್ಪ ಸೇರಿಸಿದರೆ ನನ್ಯರಿ ಸಿದ್ಧವಾಗುತ್ತದೆ. ಇದು ತಮ್ಮ ಬಳಕೆಗಷ್ಟೇ ಅಲ್ಲದೆ ಬಂಧು ಬಾಂಧವರ ಮನೆಗೂ ರವಾನೆಯಾಗುತ್ತದೆ. ಹೀಗೆ ಸಂತಾನ, ಸಂಪತ್ತು, ಸಮೃದ್ಧಿಯ ಫಲಕ್ಕಾಗಿ ಭೂಮಿಯನ್ನು ಆರಾಧಿಸಲಾಗುತ್ತದೆ.

ನಮ್ಮ ಸಂಸ್ಕೃತಿ, ಸಂಪ್ರದಾಯ ಒಂದು ಕಡೆ ಹೆಣ್ಣನ್ನು ತಾಯಿಯಾಗಿ ದೇವತೆಯಾಗಿ ಗೌರವಿಸಿದರೆ ಇನ್ನೊಂದೆಡೆ ಮುಟ್ಟಿಗೆ ಕಾರಣವಾಗಿ ತಾನು ಹುಟ್ಟು ತಳೆದ ಸಹಜ ಜೈವಿಕ ಕ್ರಿಯೆಯನ್ನು ಮರೆತು ಬಿಡುತ್ತದೆ. ಅವಳ ಮುಟ್ಟುಚಟ್ಟುಗಳಿಗೂ ತನಗೂ ಸಂಬಂಧವೇ ಇಲ್ಲದಂತೆ ಅವಳನ್ನು ಮಲತಾಯಿಯಾಗಿ ನೋಡುವ ಪರಿ ಎಷ್ಟರ ಮಟ್ಟಿಗೆ ಸಮಂಜಸ ಎಂಬ ಪ್ರಶ್ನೆ ಕೊನೆಗೂ ಉಳಿದು ಬಿಡುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ನಾವು ತಪ್ಪನ್ನೇ ಮಾಡುವುದಿಲ್ಲ ಎಂದುಕೊಳ್ಳುವ, ತಪ್ಪನ್ನು ಎಂದೂ ಮಾಡಬಾರದು.
  —ಗಾಂಧೀಜಿ
- ಮನುಷ್ಯ ಅಲ್ಪಜ್ಞಾನಿ. ಮುಂದೇನು ಸಂಭವಿಸುವುದು ಎಂಬುದನ್ನು ಅವನ ಸಣ್ಣ ಮನಸ್ಸು ಊಹಿಸಲಾರದು.
  —ಪಂಜೆ ಮಂಗೇಶರಾವ್
- ಆತ್ಮವಿಶ್ವಾಸ ಜಯದ ಮೊದಲ ಗುಟ್ಟು.
  —ಎಮರ್ಸನ್
- ದಯೆಯೇ ತೃಪ್ತಿಯನ್ನು ತರುವ ಸತ್ಯ.
  —ಖಲೀಲ್ ಗಿಬ್ರಾನ್
- ಯಾವುದು ಕಾಲದ ಕಠಿಣ ಪರೀಕ್ಷೆಯಲ್ಲೂ ಅಚಲವಾಗಿರುತ್ತದೆಯೋ ಅದೇ ಸತ್ಯ.
  —ಐನ್‌ಸ್ಟೀನ್
- ಅವಸರದ ಜೀವನ ಮತ್ತು ಕವಲಾಗಿರುವ ಗುರಿ, ನವನಾಗರಿಕತೆಗೆ ಹಿಡಿದಿರುವ ದೊಡ್ಡ ರೋಗಗಳು.
  —ಮ್ಯಾಥ್ಯೂ ಅರ್ನಾಲ್ಡ್
- ನಾವು ನಂಬುವ ತತ್ವಗಳಿಗಿಂತ, ದೇವರಿಗಿಂತ, ನಾವು ಬದುಕುವ ರೀತಿ ಮುಖ್ಯ.
  —ಎ.ಎನ್. ಮೂರ್ತಿರಾವ್